[Govt. of Karnataka C.R.P. 67]

| Deposition Sheets (RP.No.57) Form No.4 (Civil) | IN THE COURT OF <u>CIVIL JUDGE & J.M.F.C., KARKALA.</u> |
|---|---|

Criminal Case No. 98/2019

..................................................Vs....................................

ಸಾಕ್ಷಿದಾರನ ಹೆಸರು ಃ ಮಂಜುನಾಥ್ ಡಿ.ಡಬ್ಲ್ಯೂಃ 1

ತಂದೆಯ ಹೆಸರುಃ ಎಸ್. ರಾಜು

ಪ್ರಾಯ ಃ 48 ವರ್ಷ

ಉದ್ಯೋಗ ಃ ಇಲ್ಲ

ವಾಸ ಃ ಕುಕ್ಕುಂದೂರು

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ದಿಃ 31-07-2025

<u>ಮುಖ್ಯ ವಿಚಾರಣೆಃ ಆರೋಪಿ ಪರಃ ಶ್ರೀ. ಎನ್.ಎಮ್.ಜೆ. ವಕೀಲರಿಂದಃ</u>

ನಾನು ಶಾಲೆಗೆ ಹೋಗಿರುವುದಿಲ್ಲ. ಸಹಿ ಮಾಡಲು ಮಕ್ಕಳ್ಳಿಂದ ಕಲಿತಿರುತ್ತೇನೆ. ನನಗೆ ಓದಲು ಬರೆಯಲು ಬರುವುದಿಲ್ಲ. ನನಗೆ ಕಿವಿ ಕೇಳಿಸುವುದಿಲ್ಲ ಹಾಗೂ ಮಾತನಾಡಲು ಬರುವುದಿಲ್ಲ. ನಾನು ಶೇಕಡಾ 75 ರಷ್ಟು ಅಂಗವಿಕಲನಾಗಿರುತ್ತೇನೆ ಎಂದು ಕಾರ್ಕಳ ಸರ್ಕಾರಿ ಆಸ್ಪತ್ರೆಯ ವೈದ್ಯರು ಪ್ರಮಾಣ ಪತ್ರ ನೀಡಿರುತ್ತಾರೆ. ಸದ್ರಿ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ನಿಡಿ-1 ಎಂದು ಗುರುತಿಸಲಾಯಿತು. ನಾನು ಅಂಗವಿಕಲನಾದ ಕಾರಣ ನನಗೆ ಸರ್ಕಾರದಿಂದ ಅಂಗವಿಕಲ ವೇತನ ಜಾರಿಯಾಗಿರುತ್ತದೆ. ಸದ್ರಿ ಮಂಜೂರಾತಿ ಆದೇಶವನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ಅಂಗವಿಕಲ ವೇತನ ಯೋಜನೆ ಅಡಿಯಲ್ಲಿ ನೀಡಲಾದ ಗುರುತು ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-3 ಎಂದು ಗುರುತಿಸಲಾಯಿತು.

ನಾನು ಪಿರ್ಯಾದುದಾರರ ಕೈಕೆಳಗೆ ಸುಮಾರು 13 ವರ್ಷಗಳ ಕಾಲ ಕಲ್ಲು ಒಡೆಯುವ ಕೆಲಸ ಮಾಡಿರುತ್ತೇನೆ. ಪಿರ್ಯಾದುದಾರರಿಂದ ವೇತನ ಪಡೆಯಲು ಅವರ ದಾಖಲೆಗಳಿಗೆ ಸಹಿ ಹಾಕಿರುತ್ತೇನೆ. ಸದ್ರಿ ದಾಖಲೆಗಳು ಪಿರ್ಯಾದುದಾರರ ಬಳಿ ಇತ್ತು. ನಾನಲ್ಲದೆ ನಾಲ್ಕೈದು ಜನ ಕೂಡಾ ಪಿರ್ಯಾದುದಾರರೊಡನೆ ಕೆಲಸ ಮಾಡುತ್ತಿದ್ದರು.

ಅವರುಗಳಿಗೆ ಯಾವುದೇ ನ್ಯೂನ್ಯತೆ ಇರಲಿಲ್ಲ. ನಾನು ಕೆಲಸ ಮಾಡುವ ಸಮಯದಲ್ಲಿ ಗಣಿಇಲಾಖೆ ಅಧಿಕಾರಿಗಳು ಹಲವಾರು ಬಾರಿ ನನ್ನನ್ನು ಬಂಧಿಸಿರುತ್ತಾರೆ. ಉಳಿದವರಿಗೆ ಪಿರ್ಯಾದುದಾರರು ಗಣಿ ಇಲಾಖೆ ಅಧಿಕಾರಿಗಳು ದಾಳಿ ಮಾಡುವ ವಿಚಾರವನ್ನು ತಿಳಿಸಿದ್ದು ಅವರು ಓಡಿ ತಪ್ಪಿಸಿಕೊಂಡಿರುತ್ತಾರೆ. ನನ್ನನ್ನು ಕೆಲಸದ ಅವಧಿಯಲ್ಲಿ ಬ್ಯಾಂಕಿಗೆ ಕರೆದುಕೊಂಡು ಹೋಗಿ ವಿಜಯಾ ಬ್ಯಾಂಕ್ ನ ಕುಕ್ಕುಂದೂರು ಶಾಖೆಯಲ್ಲಿ ಬ್ಯಾಂಕ್ ಖಾತೆ ಮಾಡಿಸಿರುತ್ತಾರೆ. ಸದ್ರಿ ಬ್ಯಾಂಕ್ ಖಾತೆಯ ಪಾಸ್ ಪುಸ್ತಕವನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-4 ಎಂದು ಗುರತಿಸಲಾಯಿತು. ನಂತರ ನನ್ನನ್ನು ಬ್ಯಾಂಕ್ ಗೆ ಕರೆದುಕೊಂಡು ಹೋಗಿ ಚೆಕ್ ಪುಸ್ತಕವನ್ನು ಪಡೆದಿರುತ್ತಾರೆ. ಸದ್ರಿ ಚೆಕ್ ಪುಸ್ತಕವನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-5 ಎಂದು ಗುರುತಿಸಲಾಯಿತು. ಸದ್ರಿ ಚೆಕ್ ಪುಸ್ತಕದಲ್ಲಿ 2 ಚೆಕ್ ಗಳನ್ನು ಪಿರ್ಯಾದುದಾರರು ಪಡೆದುಕೊಂಡಿರುತ್ತಾರೆ. ಒಂದು ಚೆಕ್ಕನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುತ್ತಾರೆ. ನಿಪಿ-1 ರಲ್ಲಿರುವ ಸಹಿ ನನ್ನದಲ್ಲ. ನಿಪಿ-1 ರಲ್ಲಿ ಯಾವುದೇ ಬರವಣಿಗೆಯನ್ನು ನಾನು ಮಾಡಿರುವುದಿಲ್ಲ. ಇನ್ನೊಂದು ಚೆಕ್ ಪಿರ್ಯದುದಾರರ ಬಳಿಯಲ್ಲಿಯೇ ಇದೆ. 2015 ರಲ್ಲಿ ಕೆಲಸಕ್ಕೆ ಹೋಗುವುದನ್ನು ನಾನು ನಿಲ್ಲಿಸಿರುತ್ತೇನೆ. ಗಣಿ ಇಲಾಖಾ ಅಧಿಕಾರಿಗಳು ಕ್ವಾರೆ ಗೆ ಪರವಾನಿಗೆ ಇಲ್ಲ ಎಂದು ಹೇಳಿದ್ದರಿಂದ ನಾನು ಕೆಲಸಕ್ಕೆ ಹೋಗುವುದನ್ನು ನಿಲ್ಲಿಸಿರುತ್ತೇನೆ.

ನಂತರ ಪಿರ್ಯಾದುದಾರರು ಹಲವಾರು ಬಾರಿ ನನ್ನನ್ನು ಕೆಲಸಕ್ಕೆ ಬರುವಂತೆ ಒತ್ತಾಯ ಪಡಿಸಿರುತ್ತಾರೆ. ಕೆಲಸಕ್ಕೆ ಹೋಗದಿದ್ದರೆ ಪೋಲಿಸ್ ಠಾಣೆಗೆ ದೂರು ನೀಡುವುದಾಗಿ ತಿಳಿಸಿರುತ್ತಾರೆ. ನಂತರ ನನಗೆ ಕೆನ್ನೆಗೆ ಹೊಡೆದು, ಕಾಲಿನಿಂದ ದೂಡಿ ಹಾಕಿ ಹಲ್ಲೆ ಮಾಡಿರುತ್ತಾರೆ. ನಂತರ ನಾನು ಸಾಯುವವರೆಗೆ ನ್ಯಾಯಾಲಯಕ್ಕೆ ಅಲೆದಾಡುವಂತೆ ಮಾಡುತ್ತೇನೆ ಎಂದು ಹೇಳಿರುತ್ತಾರೆ. ನಿಪಿ-1 ರಲ್ಲಿರುವ ಸಹಿಯನ್ನು ಪಿರ್ಯಾದುದಾರರೇ ಹಾಕಿರುತ್ತಾರೆ. ನಾನು ಪಿರ್ಯಾದುದಾರರಿಂದ ರೂ.1,50,000/- ಸಾಲವನ್ನುಪಡೆದಿರುವುದಿಲ್ಲ. ಅವರಿಗೆ ಯಾವುದೇ ಹಣ ಕೊಡಲು ಭಾಧ್ಯಸ್ಥನಾಗಿರುವುದಿಲ್ಲ.

( ಆರೋಪಿ ಕಿವಿ ಕೇಳದೇ ಇದ್ದು ಮಾತು ಬಾರದ ಕಾರಣ ಅವರ ಹೆಂಡತಿಯನ್ನು ಭಾಷಾಂತರಕಾರರನ್ನಾಗಿ ನೇಮಿಸಿಕೊಳ್ಳಲಾಯಿತು)

<u>ಪಾಟೀ ಸವಾಲುಃ ಪಿರ್ಯಾದುದಾರರ ಪರಃ ಶ್ರೀ.ಬಿ.ಎಮ್.ಎಸ್ ವಕೀಲರು</u>

ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ